ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಿಸುವ ಬಗ್ಗೆ

೪೩೦. ಶ್ರೀ ಜಿ. ಎಸ್. ಆಚಾರ್. (ಬೈಂದೂರು). ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಿಸಲು ಸರ್ಕಾರ ಕಳೆದ ವರ್ಷವೇ ಆಶ್ವಾಸನೆ ನೀಡಿದ್ದು ಈ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಆ) ೧೯೮೭-೮೮ರಲ್ಲಿ ಇದಕ್ಕಾಗಿ ಎಷ್ಟು ಹಣ ವಿನಿಯೋಗಿಸಲಾಗಿದೆ.

ಇ) ನಿರ್ಮಾಣ ಕಾರ್ಯ ಯಾವಾಗ ಆರಂಭವಾಗುವುದು?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿ).—

ಅ) ಸರ್ಕಾರ ಕಳೆದ ವರ್ಷ ನೀಡಿದ್ದ ಆಶ್ವಾಸನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಹಣ ಒದಗಿಸಿದೆ.

ಆ) ೨.೫೦ ಲಕ್ಷ ರೂ.ಗಳನ್ನು ಒದಗಿಸಿದೆ.

ಇ) ಸದರಿ ಕಾಲೇಜಿನ ಮೊದಲನೆಯ ಹಂತದ ಕಟ್ಟಡ ನಿರ್ಮಾಣದ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಕಳುಹಿಸಲು ಕಾಲೇಜು ಶಿಕ್ಷಣ ನಿರ್ದೇಶಕರನ್ನು ಕೋರಲಾಗಿದೆ. ನಕ್ಷೆ ಮತ್ತು ಅಂದಾಜು ಪಟ್ಟಿ ಬಂದ ಕೂಡಲೇ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಈ ಸಾಲಿನಲ್ಲೇ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಶಿಕ್ಷಣ ಇಲಾಖೆಯಲ್ಲಿ ಎರಡನೆ ದರ್ಜೆ ಗೆಜೆಟೆಡ್ ಹುದ್ದೆಗಳಿಗೆ ನೇಮಕ

೪೩೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಪ್ರಾಥಮಿಕ ಪ್ರೌಢಶಿಕ್ಷಣ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕ್ಷಣ ಇಲಾಖೆಯಲ್ಲಿ ಎರಡನೆ ದರ್ಜೆಯ ರಾಜ್ಯ ಪತ್ರಾಂಕಿತ ಹುದ್ದೆಗಳಿಗೆ ನಂ. ಇ.ಡಿ.ಪಿ. ಆರ್.ಎಮ್. ೭-೮೪ಖಿ ಲಳಿ ತಾರೀಖು ೨೮-೧-೮೪ರ ಸರ್ಕಾರ ಅಧಿಸೂಚನೆ ಪ್ರಕಾರ ಬಡ್ತಿ ನೀಡಿದ್ದು ಆ ಬಡ್ತಿ ೧-೪-೮೬ರಿಂದ ಕೊಡಬೇಕಾಗಿದೆ ಎಂಬುದು ನಿಜವೇ;

ಆ) ಆ ಸಲಂವಾಗಿ ೬-೫-೮೪ರಂದು ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ ಪ್ರಕಟವಾಗಿ ಒಂಭದು ವರ್ಷದ ಮೇಲಾದರೂ ಅಂತಿಮ ಜ್ಯೇಷ್ಠತಾಪಟ್ಟಿ ಪ್ರಕಟವಾಗದಿರಲು ಕಾರಣವೇನು;

ಇ) ಸುಮಾರು ೧೫ ವರ್ಷಗಳಿಂದ ಈ ವಿಚಾರ ನನೆಗುದಿಗೆ ಬಿದ್ದಿದು ಅಧ್ಯಾಪಕರಿಗೆ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇದರ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು)—

ಅ) ನಿಜ.

ಆ) ಅಧಿಸೂಚನೆ ಸಂಖ್ಯೆ. ಇಡಿ ೭೫ ಡಿಪಿಇ ೮೪ ದಿನಾಂಕ ೩-೮-೧೯೮೭ರಲ್ಲಿ ಮುಂಬಡ್ತಿಯ ಪುನರ್ವಿಲೋಕನ ಮತ್ತು ದರ್ಜೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಇ) ಪ್ರಶ್ನೆ (ಆ)ರಲ್ಲಿ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ೧-೪-೧೯೮೬ರಿಂದ ೩೧-೫-೧೯೭೭ರ ತನಕ ನೀಡಿದ ಮುಂಬಡ್ತಿಯ ಪುನರ್ವಿಲೋಕನ ಮತ್ತು ಅಂತಿಮಗೊಳಿಸಿ ಪ್ರಕಟಿಸಿರುವ ದರ್ಜೆ ಪಟ್ಟಿಯ ಹಿನ್ನೆಲೆಯಲ್ಲಿ ೧-೬-೧೯೭೭ರಿಂದ ಈಚೆಗೆ ಅರ್ಹತಾ ದಿನಾಂಕವನ್ನು ನಿಗದಿಪಡಿಸುವ ಬಗ್ಗೆ ಕ್ರಮ ಕೈಗೊಂಡು ನ್ಯಾಯೋಚಿತ ರೀತಿಯಲ್ಲಿ ಲಭ್ಯವಾಗುವ ಸೌಲಭ್ಯವನ್ನು ನೀಡಲಾಗುವುದು.